2016 ಕ.ತೀ.ವ 1353

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎಚ್. ಬಿಲ್ಲಪ್ಪ
## ಮತ್ತು
## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಪಿ.ಎಸ್. ದಿನೇಶ್ ಕುಮಾರ್

### ಸರ್ಕಾರದ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ ಮತ್ತು ಇತರರು –ವಿರುದ್ಧ– ಶ್ರೀಮತಿ ಜನಾಬಿ*

ಕರ್ನಾಟಕ ಸಿವಿಲ್ ಸೇವಾ ನಿಯಮಗಳು, 1957ರಡಿ ಅರ್ಜಿ.

ನಿಯಮ 247–ಎ(1) – ಪಿಂಚಣಿ ಪ್ರಯೋಜನಗಳಿಗಾಗಿ ಕ್ಲೇಮು – ಮೃತ ನೌಕರನ ಪತ್ನಿಯಿಂದ ಸಲ್ಲಿಸಲಾದ ಅರ್ಜಿ–ಕೆಸಿಎಸ್‌ಆರ್‌ನ 247–ಎ(1) ನಿಯಮದಡಿ ಪ್ರತ್ಯರ್ಜಿದಾರನ ವಾದವನ್ನು ಪರಿಗಣಿಸಲು ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿ, ಕರ್ನಾಟಕ ಆಡಳಿತ ನ್ಯಾಯಾಧಿಕರಣವು ಹೊರಡಿಸಿದ ಆದೇಶಕ್ಕೆ ಆಕ್ಷೇಪಣೆ – ಮೃತನು ಮೊದಲು ದಿನಗೂಲಿ ನೌಕರನಾಗಿ ಕೆಲಸ ಮಾಡುತ್ತಿದ್ದು ನಂತರ, ದಿನಾಂಕ 01.07.1985ರಂದು ನಿಯಮಿತ ಸೇವೆಯಲ್ಲಿ ವಿಲೀನವಾಗಿದ್ದು, ದಿನಾಂಕ 31.1.1995ರ ವರೆಗೆ ಕಾರ್ಯ ನಿರ್ವಹಿಸಿರುತ್ತಾನೆ. 247–ಎ (1)ನಿಯಮವು, ಸರ್ಕಾರದ ಯಾವುದೇ ನಿಯಮ ಅಥವಾ ನೀತಿಯ ಅನುಸಾರವಾಗಿ, 30 ವರ್ಷ ವಯಸ್ಸಾದ ನಂತರ ನೇಮಕವಾದ ವ್ಯಕ್ತಿಗಳಿಗೆ ಅನ್ವಯಿಸುತ್ತದೆ. "ನೇರವಾಗಿ" ಎಂಬ ಪದವು ನಿಯಮದಲ್ಲಿ, ಅದು 15.02.2012ಕ್ಕಿಂತ ಮುಂಚೆ ಇದ್ದುದರಿಂದ, ಕಾಣೆಯಾಗಿದೆಯೆಂಬುದನ್ನು ಗಮನಿಸುವುದು ಸೂಕ್ತ. ನಿರಸನದ ಫಲಿತಾಂಶವಾಗಿ, ಶಾಸನವು ಅಂಥ ನಿರಸನದ ದಿನಾಂಕದಿಂದ ಪರಿಣಾಮಕಾರಿಯಾಗಿರುವುದು ನಿಂತು ಹೋಗುತ್ತದೆಂಬುದು ಸ್ಥಾಪಿತ ನಿಯಮವಾಗಿದೆ.

ಆದುದರಿಂದ ಸದರಿ ನಿಯಮದಡಿ ಕೆಎಟಿ ನೀಡಿದ ನಿರ್ದೇಶನದಲ್ಲಿ ಯಾವುದೇ ದೋಷವಿಲ್ಲವೆಂದು ಅಭಿಪ್ರಾಯಪಟ್ಟು, ರಿಟ್ ಅರ್ಜಿಯನ್ನು ತಿರಸ್ಕರಿಸಲಾಗಿದೆ.

*ರಿಟ್ ಅರ್ಜಿ ಸಂಖ್ಯೆ: 105595/2015 (ಎಸ್–ಕೆಎಟಿ), ದಿನಾಂಕ: 4ನೇ ಜನವರಿ, 2016.

***ಉಲ್ಲೇಖಿಸಲಾದ ಮೊಕದ್ದಮೆ*** ***ಪ್ಯಾರಾದಲ್ಲಿ***

1. *(1996) ಸುಪ್ರೀಂ ಕೋರ್ಟ್ ಕೇಸಸ್ 60*
*ರಾಜಸ್ಥಾನ ರಾಜ್ಯ –ವಿರುದ್ಧ– ಮಂಗಿಲಾಲ್ ಪಿಂಡ್ವಲ್ (ಉಲ್ಲೇ) 11*

ಅರ್ಜಿದಾರರ ಪರ: ಶ್ರೀಮತಿ ವೀಣಾ ಹೆಗ್ಡೆ, ಎಚ್‌ಸಿಜಿಪಿ.
ಪ್ರತ್ಯರ್ಜಿದಾರರ ಪರ: ಶ್ರೀ ವಿಠ್ಠಲ್ ಎಸ್. ತೆಲಿ, ಸಿ/ಪ್ರತ್ಯರ್ಜಿದಾರರ ಪರ ವಕೀಲರು.

**ಆಜ್ಞೆ**

**ನ್ಯಾಯಮೂರ್ತಿ ಶ್ರೀ ದಿನೇಶ್ ಕುಮಾರ್:**

ಕರ್ನಾಟಕ ಸಿವಿಲ್ ಸೇವಾ ನಿಯಮಗಳ (ಸಂಕ್ಷಿಪ್ತವಾಗಿ ನಿಯಮಗಳು) 247–ಎ(1)ನೇ ನಿಯಮದಡಿ, ಪ್ರತ್ಯರ್ಜಿದಾರಳು ಹಕ್ಕುಳ್ಳವಳಾಗಿರಬಹುದಾದ ಪ್ರಯೋಜನಗಳನ್ನು ಪಡೆಯಲು ಹಾಗೂ ಅದರ ಮೇಲೆ ಸೂಕ್ತ ಆದೇಶಗಳನ್ನು ಜಾರಿ ಮಾಡಲು, ಇದರಲ್ಲಿ ಆಕೆಯ ಮೊಕದ್ದಮೆಯನ್ನು ಪರಿಶೀಲಿಸುವಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿ, ಎ.ನಂ.4513/2004ರಲ್ಲಿ ಕರ್ನಾಟಕ ಆಡಳಿತ ನ್ಯಾಯಾಧಿಕರಣವು (ಸಂಕ್ಷಿಪ್ತವಾಗಿ ಕೆಎಟಿ) ಹೊರಡಿಸಿದ ದಿನಾಂಕ 24.02.2015ರ ಆದೇಶವನ್ನು ಪ್ರಶ್ನಿಸಿ, ರಾಜ್ಯ ಸರ್ಕಾರವು ಈ ಅರ್ಜಿಯನ್ನು ಸಲ್ಲಿಸಿದೆ.

2. ಅರ್ಜಿದಾರರ ಪರ ಹಾಜರಾದ ಉಚ್ಚ ನ್ಯಾಯಾಲಯದ ಮಾನ್ಯ ಸರ್ಕಾರಿ ವಕೀಲರಾದ ಶ್ರೀಮತಿ ವೀಣಾ ಹೆಗ್ಡೆ ಮತ್ತು ಪ್ರತ್ಯರ್ಜಿದಾರರ ಪರ ಹಾಜರಾದ ಮಾನ್ಯ ವಕೀಲರಾದ ಶ್ರೀ ವಿಠ್ಠಲ್ ಎಸ್. ತೆಲಿಯವರ ವಾದಗಳನ್ನು ಆಲಿಸಲಾಗಿದೆ.

3. ಪ್ರತ್ಯರ್ಜಿದಾರಳ ಪತಿಯಾದ ದಿವಂಗತ ಚೌಡಪ್ಪ ಮೊಟಾರೆ ಲೋಕೋಪಯೋಗಿ ಇಲಾಖೆಯಲ್ಲಿ ದಿನಗೂಲಿ ನೌಕರನಾಗಿದ್ದನು. ಅವರು ದಿನಾಂಕ 01.07.1985ರಂದು ಖಾಯಂ ಸೇವೆಯಲ್ಲಿ ವಿಲೀನಗೊಂಡಿದ್ದನು ಮತ್ತು ದಿನಾಂಕ

31.01.1995ರಂದು ವಯೋನಿವೃತ್ತಿ ಹೊಂದಿದ್ದು, ನಿವೃತ್ತನಾಗಿದ್ದನು ಹಾಗೂ ದಿನಾಂಕ 16.02.1998ರಂದು ಮರಣ ಹೊಂದಿದ್ದನು. ಪ್ರತ್ಯರ್ಜಿದಾರಳು ಪಿಂಚಣಿ ಪ್ರಯೋಜನಗಳ ಅನುದಾನಕ್ಕಾಗಿ ಅರ್ಜಿ ಸಲ್ಲಿಸಿದ್ದು, ಅದು ಮೃತ ಚೌಡಪ್ಪ ಮೊಟಾರೆ 10 ವರ್ಷಗಳ ಅರ್ಹತಾ ಸೇವೆಯನ್ನು ಪೂರ್ಣಗೊಳಿಸಿರಲಿಲ್ಲವೆಂದು ಹೇಳಿ, ದಿನಾಂಕ 19.11.2003ರ ಅನುಬಂಧ–ಎ7 ಅನುಸಾರ ಪತ್ರದಲ್ಲಿರುವಂತೆ ಆ ಅರ್ಜಿಯು ತಿರಸ್ಕೃತವಾಗಿತ್ತು. ಸದರಿ ಹಿಂಬರಹವನ್ನು ಪ್ರತ್ಯರ್ಜಿದಾರಳು ಕೆಎಟಿ ಮುಂದೆ ಪ್ರಶ್ನಿಸಿರುತ್ತಾಳೆ. ಪ್ರಶ್ನಿತ ಆದೇಶದ ಮೂಲಕ, ತನ್ನ ಮುಂಚಿನ ತೀರ್ಪುಗಳನ್ನು ಪ್ರಸ್ತಾಪಿಸಿದ ನಂತರ, ಕೆಎಟಿಯು ನಿಯಮಗಳ 247–ಎ(1) ನಿಯಮದಡಿ ಪ್ರತ್ಯರ್ಜಿದಾರಳ ಪ್ರಕರಣವನ್ನು ಪರಿಗಣಿಸಲು ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

4. ಸದರಿ ನಿಯಮದ ಪ್ರಯೋಜನವನ್ನು ಎರಡು ಆಧಾರಗಳ ಮೇಲೆ ಈ ಮೊಕದ್ದಮೆಯ ಸಂಗತಿಗಳಿಗೆ ಅನ್ವಯಿಸಲಾಗುವುದಿಲ್ಲವೆಂದು ಮಾನ್ಯ ಸರ್ಕಾರಿ ವಕೀಲರು ವಾದಿಸಿದ್ದಾರೆ.

5. ಮೊದಲನೆಯದಾಗಿ,

> *"**247–ಎ(1)** ಕರ್ನಾಟಕ ಲೋಕಸೇವಾ ಆಯೋಗ ಅಥವಾ ಇತರ ನೇಮಕಾತಿ ಪ್ರಾಧಿಕಾರಗಳ ಮುಖಾಂತರ, ನೇಮಕಾತಿಯ ನಿಯಮಗಳ ಪ್ರಕಾರ ಅಥವಾ ಅವುಗಳ ಅನುಸರಣೆಯಲ್ಲಿ, 30 ವರ್ಷಗಳ ವಯಸ್ಸಾದ ನಂತರ ನೇರವಾಗಿ ನೇಮಕಾತಿ ಹೊಂದಿದ ವ್ಯಕ್ತಿಗಳ ಸಂದರ್ಭದಲ್ಲಿ, ಅವರ ನೇರ ನೇಮಕಾತಿಯ ದಿನಾಂಕದ ನಿಕಟ ಪೂರ್ವದ ಜನ್ಮ ದಿನಾಂಕದಂದು ಅವರ ವಯಸ್ಸು ಮತ್ತು ಗರಿಷ್ಠ ಎರಡು ವರ್ಷಗಳಿಗೊಳಪಟ್ಟು, ಮೂವತ್ತು ವರ್ಷಗಳು –ಇವೆರಡರ ನಡುವಿನ ವ್ಯತ್ಯಾಸಕ್ಕೆ ಸಮಾನವಾದ ಅವಧಿಯನ್ನು ಅವರ ಅರ್ಹತಾ ಸೇವೆಗೆ ಸೇರಿಸತಕ್ಕದ್ದು."*

–ಎಂದು ಓದಲಾಗುವ 247–ಎ(1) ನಿಯಮವು, 30 ವರ್ಷಗಳ ವಯಸ್ಸನ್ನು ಪೂರೈಸಿದ ನಂತರ 'ನೇರವಾಗಿ' ನೇಮಕವಾದಂಥ ನೌಕರರಿಗೆ ಮಾತ್ರ ಅನ್ವಯವಾಗುವುದರಿಂದಾಗಿ, ಸದ್ಯದ ಪ್ರಕರಣದಲ್ಲಿ ಮೃತನು ಹುದ್ದೆಗೆ ನೇರವಾಗಿ ನೇಮಕವಾಗಿರಲಿಲ್ಲ. ಆದರೆ ಒಂದು ಸರ್ಕಾರದ ನೀತಿಯ ಅಡಿಯಲ್ಲಿ ವಿಲೀನಗೊಂಡಿರುತ್ತಾನೆ.

6. ಎರಡನೆಯದಾಗಿ, ಪ್ರಶ್ನಿತ ಆದೇಶದಿಂದ ಕರ್ನಾಟಕ ಆಡಳಿತ ನ್ಯಾಯಾಧಿಕರಣವು ದಿನಾಂಕ 19.11.2003ರ ಹಿಂಬರಹದ ಕಾನೂನುಬದ್ಧತೆ ಮತ್ತು ಸರಿತನವನ್ನು ಎತ್ತಿಹಿಡಿದಿದೆ ಮತ್ತು ಸದರಿ ಹಿಂಬರಹವನ್ನು ರದ್ದುಪಡಿಸಿಲ್ಲವಾದ್ದರಿಂದ ಸರ್ಕಾರದ ವಿರುದ್ಧ ಪ್ರಶ್ನಿತ ನಿರ್ದೇಶನಗಳು ಸಮರ್ಥನೀಯವಾಗಿಲ್ಲ.

7. ಇದಕ್ಕೆ ವಿರುದ್ಧವಾಗಿ, ಪ್ರತ್ಯರ್ಜಿದಾರರ ಪರ ಮಾನ್ಯ ವಕೀಲರು ಪ್ರಶ್ನಿತ ಆದೇಶವನ್ನು ಸಮರ್ಥಿಸಿ, ಅಪೀಲುದಾರರು ಅವಲಂಬಿತರಾಗಿರುವ 247–ಎ(1)ನೇ ನಿಯಮವು, 15.02.2012ರಿಂದ ಮತ್ತು ಆ ನಂತರ ಅಸ್ತಿತ್ವಕ್ಕೆ ಬಂದ ತಿದ್ದುಪಡಿ ಆವೃತ್ತಿಯಾಗಿದೆ ಎಂದು ನಿವೇದಿಸಿರುತ್ತಾರೆ. ಅವರು, ಈ ನಿಯಮವು ಸೂಕ್ತ ಕಾಲಾವಧಿಯಲ್ಲಿದ್ದಾಗ, ಎಂದರೆ, ಮೃತ ಚೌಡಪ್ಪ ಮೋಟಾರೆಯು ಖಾಯಂ ಸೇವೆಯಲ್ಲಿ ವಿಲೀನಗೊಂಡ ದಿನಾಂಕವಾದ 01.07.1985ರಂದು ಇದ್ದಾಗ, ಅದರಿಂದಾಗುವ ಪ್ರಯೋಜನಗಳಿಗಾಗಿ ಪ್ರತ್ಯರ್ಜಿದಾರರಲ್ಲಿ ಒಬ್ಬನಿಗೆ ಸಂಬಂಧಪಡುವ ವಾದಗಳನ್ನು ಪರಿಗಣಿಸಲು ಅಪೀಲು ಸರ್ಕಾರಕ್ಕೆ ವಿಪುಲ ಅಧಿಕಾರವನ್ನು ನೀಡಿರುತ್ತದೆ ಎಂದು ವಾದಿಸಿದ್ದಾರೆ. ತದನುಸಾರವಾಗಿ, ಅವರು ಈ ಅರ್ಜಿಯನ್ನು ವಜಾ ಮಾಡಲು ಕೋರಿರುತ್ತಾರೆ.

8. ಪಕ್ಷಕಾರರ ಪರ ಮಾನ್ಯ ವಕೀಲರು ಮಂಡಿಸಿದ ಪರಸ್ಪರ ವಿರೋಧದ ವಾದಗಳನ್ನು ನಾವು ತೀವ್ರ ಕಾಳಜಿಯಿಂದ ಪರಿಗಣಿಸಿರುತ್ತೇವೆ.

9. ನಮ್ಮ ಪರಿಶೀಲನೆಗೆ ಬಂದ ಅಂಶವು ಹೀಗಿರುತ್ತದೆ:

*"ತಿದ್ದುಪಡಿ ನಿಯಮ ಅಥವಾ ತಿದ್ದುಪಡಿಗೆ ಮುಂಚೆ ಇದ್ದ ನಿಯಮವು ಈ ಮೊಕದ್ದಮೆಯ ಸಂಗತಿಗಳಿಗೆ ಅನ್ವಯಿಸುತ್ತದೆಯೇ?"*

10. ಮೃತ ಚೌಡಪ್ಪ ಮೊಟಾರೆಯು ಪ್ರಾರಂಭದಲ್ಲಿ ದಿನಗೂಲಿ ನೌಕರನಾಗಿ ಕೆಲಸ ಮಾಡುತ್ತಿದ್ದನು ಮತ್ತು 01.07.1985ರಂದು ಖಾಯಂ ಸೇವೆಯಲ್ಲಿ ವಿಲೀನಗೊಳಿಸಲಾಯಿತು ಹಾಗೂ 31.01.1995ರ ವರೆಗೆ ಸೇವೆ ಸಲ್ಲಿಸಿರುತ್ತಾನೆ ಎಂಬುದರಲ್ಲಿ ಯಾವುದೇ ವಿವಾದವಿಲ್ಲ. ದಿನಾಂಕ 31.01.1995ರಂದು ಇದ್ದಂತೆ ನಿಯಮವನ್ನು ಈ ಮುಂದಿನಂತೆ ಓದಲಾಗುತ್ತದೆ:

*"247–ಎ(1) ಅಂಥ ನೇಮಕಾತಿಗೆ ಅನ್ವಯವಾಗುವ ನೇಮಕಾತಿ ನಿಯಮಗಳಿಗೆ ಹೊಂದಿಕೊಂಡು ಅಥವಾ **ಸರ್ಕಾರದ ನೀತಿ ಅಥವಾ ಆದೇಶವನ್ನು** ಅನುಸರಿಸಿ, 30 ವರ್ಷ ವಯಸ್ಸಾದ ನಂತರ ನೇಮಕವಾದ ವ್ಯಕ್ತಿಗಳ ಸಂದರ್ಭದಲ್ಲಿ, ಗರಿಷ್ಠ ಎಂಟು ವರ್ಷಗಳಿಗೊಳಪಟ್ಟು, ನೇಮಕಾತಿ ದಿನಾಂಕದ ನಿಕಟಪೂರ್ವದ ಅವರ ಜನ್ಮ ದಿನಾಂಕದಂದು ಅವರ ವಯಸ್ಸು ಮತ್ತು 30 ವರ್ಷಗಳು – ಇವೆರಡರ ನಡುವಿನ ವ್ಯತ್ಯಾಸಕ್ಕೆ ಸಮಾನವಾದ ಅವಧಿಯನ್ನು ಅವರ ಅರ್ಹತಾ ಸೇವೆಗೆ ಸೇರಿಸತಕ್ಕದ್ದು."*

*(ಒತ್ತಿ ಹೇಳಲಾಗಿದೆ)*

11. ಮೇಲ್ಕಂಡ ಉಪಬಂಧವನ್ನು ಎಚ್ಚರಿಕೆಯಿಂದ ಅವಗಾಹನೆ ಮಾಡಿದಾಗ, ಸರ್ಕಾರದ ಯಾವುದೇ 'ನಿಯಮ' ಅಥವಾ 'ನೀತಿ'ಗೆ ಅನುಸಾರವಾಗಿ, 30 ವರ್ಷಗಳ ವಯಸ್ಸಾದ ನಂತರ ನೇಮಕಾತಿ ಹೊಂದಿದ ವ್ಯಕ್ತಿಗಳಿಗೆ ಈ ನಿಯಮವು ಅನ್ವಯವಾಗುತ್ತದೆ ಎಂಬುದು ಸ್ಪಷ್ಟವಾಗಿರುತ್ತದೆ. ನಿಯಮವು ದಿನಾಂಕ 15.02.2012ಕ್ಕಿಂತ ಮುಂಚೆ ಸ್ಥಾಯಿಯಾಗಿರುವುದರಿಂದ 'ನೇರವಾಗಿ' ಎಂಬ ಪದ ಕಾಣೆಯಾಗಿದೆಯೆಂಬುದನ್ನು ಗಮನಿಸುವುದು ಸೂಕ್ತವಾಗಿದೆ. ಶಾಸನವು,

ನಿರಸನವಾಗುವುದರ ಫಲಿತಾಂಶವಾಗಿ, ಅಂಥ ನಿರಸನದ ದಿನಾಂಕದಿಂದ ಪರಿಣಾಮಕಾರಿಯಾಗುವಂತೆ ಅದು ಅಸ್ತಿತ್ವದಲ್ಲಿರುವುದು ನಿಂತುಹೋಗುತ್ತದೆ ಎಂಬುದು ಕಾನೂನಿನಲ್ಲಿ ಸ್ಥಾಪಿತವಾಗಿದೆ. ***ರಾಜಸ್ಥಾನ ರಾಜ್ಯ –ವಿರುದ್ಧ– ಮಂಗಿಲಾಲ್ ಪಿಂಡ್ವಲ್***[1], ಮೊಕದ್ದಮೆಯಲ್ಲಿ, ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ನಾವು ಉಪಯುಕ್ತಕರವಾಗಿ ಉಲ್ಲೇಖಿಸಬಹುದಾಗಿದ್ದು, ಅದರಲ್ಲಿ ಈ ಮುಂದಿನಂತೆ ತೀರ್ಮಾನಿಸಲಾಗಿದೆ:

> *"**12**. ಇದರ ಅರ್ಥವು, ಶಾಸನವು ನಿರಸನವಾದುದರ ಫಲಿತಾಂಶವಾಗಿ, ಶಾಸನವು ನಿರಸನಗೊಂಡ ಕಾರಣದಿಂದ, ಅಂಥ ನಿರಸನದ ದಿನಾಂಕಕ್ಕಿಂತ ಮುಂಚೆ ಅದು ಜಾರಿಯಲ್ಲಿದ್ದ ಕಾಲಾವಧಿಯಲ್ಲಿ ಅದನ್ನು ನಿರಸನಗೊಳಿಸಲಾಗಿರುವ ಕಾನೂನಿನ, ಹಿಂದಿನ ಜಾರಿ ಪ್ರಕ್ರಿಯೆಗೆ ಅದು ಬಾಧಕವಾಗುವುದಿಲ್ಲ ಎಂಬುದಾಗಿದೆ".*

ಅಷ್ಟೇ ಅಲ್ಲದೆ, ಅದೇ ದಿನದಂದು ರಾಜ್ಯಪತ್ರದಲ್ಲಿ ಪ್ರಕಟವಾದ ಅಧಿಸೂಚನೆ ಸಂಖ್ಯೆ ಎಫ್‌ಡಿ 4 ಎಸ್‌ಆರ್‌ಎ 2010, ಬೆಂಗಳೂರು, ದಿನಾಂಕ 15.02.2012ರ ಅಧಿಸೂಚನೆಯನ್ನು ನಾವು ಅವಗಾಹಿಸಿದ್ದೇವೆ. ಸದರಿ ಅಧಿಸೂಚನೆಯ 2ನೇ ಖಂಡದ ನಿಬಂಧನೆಗಳಿಗನುಸಾರವಾಗಿ, ನಿಯಮಗಳು ಎಂದರೆ, ಕರ್ನಾಟಕ ಸಿವಿಲ್ ಸೇವಾ (2ನೇ ತಿದ್ದುಪಡಿ) ನಿಯಮಗಳು, 2012, ಅಧಿಕೃತ ರಾಜ್ಯಪತ್ರದಲ್ಲಿ ಅವುಗಳ ಪ್ರಕಟಣೆಯ ದಿನಾಂಕದಿಂದ ಜಾರಿಗೆ ಬರುತ್ತವೆ.

ಇಂಥ ಸಂದರ್ಭಗಳಲ್ಲಿ, 15.02.2012ಕ್ಕೆ ಮುಂಚೆ ಅಸ್ತಿತ್ವದಲ್ಲಿರುವಂತೆ ನಿಯಮದ ಮೇರೆಗೆ ಪ್ರತ್ಯರ್ಜಿದಾರನ ಪ್ರಕರಣವನ್ನು ಪರಿಗಣಿಸಲು ಕೆಎಟಿ ನೀಡಿರುವ ನಿರ್ದೇಶನದಲ್ಲಿ ನಮಗೆ ಯಾವುದೇ ತಪ್ಪು ಕಂಡು ಬಂದಿಲ್ಲ. ಇಂಥ ಪರಿಸ್ಥಿತಿಯಲ್ಲಿ ಅರ್ಜಿಯು ವಿಫಲವಾಗಿರುತ್ತದೆ ಮತ್ತು ತದನುಸಾರವಾಗಿ, ವೆಚ್ಚಗಳಿಗೆ ಯಾವುದೇ ಆದೇಶವಿಲ್ಲದೆ, ಅದು ತಿರಸ್ಕೃತವಾಗಿರುತ್ತದೆ.

---

1. (1996) ಸುಪ್ರೀಂ ಕೋರ್ಟ್ ಕೇಸಸ್ 60

12. ಈ ಹಂತದಲ್ಲಿ, ಮಾನ್ಯ ಸರ್ಕಾರಿ ವಕೀಲರು ಪ್ರತ್ಯರ್ಜಿದಾರನ ಪ್ರಕರಣವನ್ನು ಪರಿಗಣಿಸಲು ಸ್ವಲ್ಪ ಕಾಲಾವಕಾಶವನ್ನು ಕೋರಿರುತ್ತಾರೆ.

13. ಪ್ರಶ್ನಿತ ಆದೇಶದಲ್ಲಿ ಒಳಗೊಂಡಿರುವ ನಿರ್ದೇಶನಗಳನ್ನು ಪಾಲಿಸಲು ಈ ಆದೇಶದ ಪ್ರತಿಯನ್ನು ಸ್ವೀಕರಿಸಿದ ದಿನಾಂಕದಿಂದ ಎರಡು ತಿಂಗಳುಗಳ ಕಾಲಾವಕಾಶವನ್ನು ನೀಡಲಾಗಿದೆ.

ಯಾವುದೇ ವೆಚ್ಚಗಳಿಲ್ಲ.